ಕಳುಹಿಸಕೊಡುತ್ತೇನೆ, ನಾನು ಕೂಡ ಬರುತ್ತೇನೆ, ಅದನ್ನು ಪರಿಶೀಲನೆ ಮಾಡೋಣ, ಯಾವುದೇ ಮುಲಾಜಿಲ್ಲದೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಧರ್ಮಸಿಂಗ್: ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ಖಂಡಿತವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ದಿನಾಂಕ 16-07-2007 ರಂದು 6ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 97 ಪ್ರಶ್ನೆಗಳ ಪೈಕಿ 83 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ಕಡೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಪಕ್ಷಬೇಧವನ್ನು ಮರೆತು ಬೀಗವನ್ನು ಹಾಕಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಇದೆ ಸದನದಲ್ಲಿ ಶಾಸಕರಿಗೆ ಗ್ರಾಮ ಪಂಚಾಯತಿಯ ಹಕ್ಕು ಕೊಡತಕ್ಕಂಥದ್ದು ಆಗಬಾರದು. ಹೆಚ್ಚಿನ ಅಧಿಕಾರ ಗ್ರಾಮ ಪಂಚಾಯತಿಗೆ ಕೊಡಬೇಕೆಂದು ಪಾಸ್ ಆಗಿರುತ್ತದೆ. ಆಗಿನ ಕಾಲದಲ್ಲಿ ನಾವು ಆಗಲಿ ಮಾನ್ಯ ಖರ್ಗೆಯವರು ಆಗಲಿ ಇದೆಲ್ಲವನ್ನು ವಿರೋಧ ಮಾಡಿದ್ದೆವು. ರಾಜೀವ್‌ಗಾಂಧಿಯವರು ಈ ದೇಶದ ಪ್ರಧಾನ ಮಂತ್ರಿಯಾದಾಗ ಕ್ರಾಂತಿಕಾರಕವಾದ ಬದಲಾವಣೆಯನ್ನು ಈ ದೇಶದಲ್ಲಿ ತಂದಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಗ್ರಾಮ ಪಂಚಾಯತಿಯವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಕರ್ನಾಟಕದಲ್ಲಿಯೂ ಕೂಡ ಗ್ರಾಮ ಪಂಚಾಯತಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಯದಾಗ ಬಳಿಗಾರ್‌ರವರು ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಮಾನ್ಯ ಮಣಿಶಂಕರ ಅಯ್ಯರ್ ರವರು ಕೂಡ ಕರ್ನಾಟಕ ರಾಜ್ಯದಲ್ಲಿ ಈ ಒಂದು ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿ ವ್ಯವಸ್ಥೆ ಚೆನ್ನಾಗಿ ನಡೆಯುತ್ತಿದೆ. ಈ ಕರ್ನಾಟಕ ಇಡೀ ದೇಶದಲ್ಲಿ ಮುಂಚೂಣಿಯಲ್ಲಿದೆ ಎಂದು ಅವರು ಶ್ಲಾಘನೆ ಮಾಡಿರುತ್ತಾರೆ. ನಾವು ಹೋದ ನಂತರ ಶ್ರೀಮಾನ್ ಉದಾಸಿಯವರು ಕೂಡ ಕರೆದಂಥ ಸಭೆಗೆ ನಾವು ಹಾಜರಾಗಿದ್ದೆವು, ಎಲ್ಲಾ ಶಾಸಕರಿಗೆ ಇವತ್ತು ಸಾಕಷ್ಟು ಕೆಲಸ ಕಾರ್ಯಗಳು ಇವೆ. ನನ್ನ ಕಾಲದಲ್ಲಿ ಕೂಡ ಅಧಿಕಾರ ಅವರಿಗೆ ಕೊಡಬೇಕು ಎನ್ನುವ ರೀತಿಯಲ್ಲಿ ಪ್ರಸ್ತಾಪವಾಯಿತು. ಇದು ಈಗಾಗಲೇ